ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)
ಸಂಪುಟ 17 ; ಸಂಚಿಕೆ 2 ; ಮೇ- ಆಗಸ್ಟ್ 2023 ; ಅಂಕಣ- ಭರತಕೌತುಕ


# ವಾಲ್ಮೀಕಿ ರಾಮಾಯಣದಲ್ಲಿ ನಾಟ್ಯ, ಸಂಗೀತದ ಪರಿಭಾಷೆಗಳ ಸಂಕಲನ

## ಭಾಗ 3- ಅರಣ್ಯಕಾಂಡ

- ಕಾಂಚನ ರೋಹಿಣಿ ಸುಬ್ಬರತ್ನಂ, ಬೆಂಗಳೂರು.
ಹೆಸರಾಂತ ಸಂಗೀತ ವಿದ್ವಾಂಸರು, ಸಂಶೋಧಕರು.



ಅರಣ್ಯದ ಹಾದಿಯಲ್ಲಿ ಸೀತಾರಾಮ ಲಕ್ಷ್ಮಣರು.



ಋಷ್ಯಾಶ್ರಮಗಳಲ್ಲಿ ಸೀತಾ ರಾಮ ಲಕ್ಷ್ಮಣರು.




ಶ್ರೀರಾಮನೂ ಆತನ ಪರಿವಾರವೂ ಅಯೋಧ್ಯೆಯಿಂದ ಶ್ರೀಲಂಕೆಯವರೆಗೂ ನಡೆದ ದಾರಿಯನ್ನು ವಿದ್ವಾಂಸರು ತಯಾರಿಸಿದ ನಕ್ಷೆ.

**ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)**
**ಸಂಪುಟ 17 ; ಸಂಚಿಕೆ 2 ; ಮೇ- ಆಗಸ್ಟ್ 2023 ; ಅಂಕಣ- ಭರತಕೌತುಕ**

**ಶ್ರೀರಾಮ ಜಯರಾಮ ಜಯ ಜಯ ರಾಮ**

**ವಾಲ್ಮೀಕಿ ರಾಮಾಯಣವನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕೆಂದು ಧಾರಾರಾಮಾಯಣದ ಸಂದರ್ಭದಲ್ಲಿ ಲೋಕಕ್ಕೆ ಬೋಧಿಸಿ, ದುರಾಗ್ರಹಚಿಂತನೆಗಳನ್ನು ನಾಶಗೊಳಿಸಿದ ಮಹಾಗುರು ಪರಮಪೂಜ್ಯ ಶ್ರೀ ಶಂಕರಾಚಾರ್ಯ, ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸನ್ನಿಧಾನಂಗಳ ಶ್ರೀಚರಣಗಳೆಂಬ ದಿವ್ಯ ಬೆಳಕಿಗೆ ನತಿಸಹಸ್ರಗಳನ್ನು ಸಮರ್ಪಿಸುತ್ತ ನನ್ನ ವಾಲ್ಮೀಕಿ ರಾಮಾಯಣದ ಸಂಗೀತ - ನೃತ್ಯಾದಿಗಳಿಗೆ ಸಂಬಂಧಿಸಿದ ಪರಿಭಾಷೆಗಳ ಸಂಕಲನದ ಈ ಬರಹಗಳನ್ನು ಸಮರ್ಪಿಸುತ್ತಿದ್ದೇನೆ.**

**ಅನುವಾದಕ್ಕಾಗಿ ನಾನು ಆಶ್ರಯಿಸಿರುವ ವಿದ್ವಾನ್ ಎನ್. ರಂಗನಾಥ ಶರ್ಮಾರವರ ಗ್ರಂಥಗಳಿಗಾಗಿ ಅವರ ಪುಣ್ಯಸ್ಮರಣೆಯನ್ನು ಮಾಡುತ್ತ ಕೃತಜ್ಞತಾಪೂರ್ವಕ ನಮಸ್ಕಾರಗಳನ್ನರ್ಪಿಸುತ್ತೇನೆ. ಈ ಗ್ರಂಥಗಳನ್ನು ನನಗೆ ಒದಗಿಸಿದ ಬೆಂಗಳೂರಿನ ಆತ್ಮೀಯ ಬಂಧು ಮಾನ್ಯ ಸಂಜಯ್ ವೇಣುಗೋಪಾಲ್ ಅವರಿಗೆ ಪ್ರೀತಿಪೂರ್ವಕ ಧನ್ಯವಾದಗಳು, ಪ್ರೀತಿಯಿಂದ ನನ್ನ ಬರಹಗಳನ್ನು ತಮ್ಮ ನಿಯತಕಾಲಿಕ ಪತ್ರಿಕೆ ನೂಪುರಭ್ರಮರಿಯಲ್ಲಿ ಪ್ರಕಟಿಸುತ್ತಿರುವ ಬಹುಶ್ರುತ ವಿದ್ವಾಂಸರಾದ, ಸಂಶೋಧಕಿ, ಕಲಾವಿದೆ ಡಾ.ಮನೋರಮಾರವರಿಗೆ ಪ್ರೀತಿಪೂರ್ವಕ ಧನ್ಯವಾದಗಳು.**

No part of this publication is allowed for copying or reproducing. Copyright protected. Copyright infringement is punishable offence.

ವಾಲ್ಮೀಕಿ ಮಹರ್ಷಿಗಳಿಗೆ ಸಂಗೀತ/ಗಾಂಧರ್ವ ವೇದ - ನೃತ್ಯಾದಿಗಳು ಪರಮಪ್ರೀತಿಯೆಂದು ತೋರುತ್ತದೆ. ಎಂದೇ ಸಂದರ್ಭವು ದೊರೆತಾಗಲೆಲ್ಲ ಅವುಗಳ ಉಲ್ಲೇಖಗಳು ಇದ್ದೇ ಇರುತ್ತವೆ. ನಾಟ್ಯಶಾಸ್ತ್ರದಲ್ಲಿ ಹೇಳಿದ ಕಾವ್ಯಗಳ ಎಲ್ಲ ಲಕ್ಷಣಗಳನ್ನೂ ಇಡೀ ವಾಲ್ಮೀಕಿ ರಾಮಾಯಣವು ಹೊಂದಿರುವುದು ಮಾತ್ರವಲ್ಲದೆ, ಎಲ್ಲೋ ಎಂದೆರಡು ವಿಷಯಗಳನ್ನು ಹೊರತುಪಡಿಸಿ ಪ್ರತಿಯೊಂದು ಕಾಂಡವೂ ಎಲ್ಲ ಕಾವ್ಯಲಕ್ಷಣಗಳನ್ನೂ ಹೊಂದಿರುವುದರಿಂದ ಅದು ಮಹಾಕಾವ್ಯವೆಂದೂ ಆದಿಕಾವ್ಯವೆಂದೂ ಶಾಶ್ವತವಾದ ಕೀರ್ತಿಯನ್ನು ಗಳಿಸಿದೆಯೆಂದು ಆರಂಭದಲ್ಲಿಯೇ ಹೇಳಿದೆ. ವಾಲ್ಮೀಕಿ ರಾಮಾಯಣವನ್ನು ಗಮನಿಸಿಯೇ, ಅನುಕರಿಸಿಯೇ ಕಾವ್ಯಲಕ್ಷಣಗಳನ್ನು ಭರತಮುನಿಯು ನಾಟ್ಯಶಾಸ್ತ್ರದಲ್ಲಿ ಲಕ್ಷಿಸಿದ್ದಾನೆಯೇ ಎಂಬ ಸಂಶಯವು ನನಗೆ ಅನೇಕ ಬಾರಿ ಬಂದದ್ದೂ ಉಂಟು. ಸಂಶೋಧಕರು ವಾಲ್ಮೀಕಿ ರಾಮಾಯಣವನ್ನು

ಭರತಮುನಿಯು ತನ್ನ ನಾಟ್ಯಶಾಸ್ತ್ರದಲ್ಲಿ ಹೇಳಿದ ಕಾವ್ಯಲಕ್ಷಣಗಳಿಗೂ ಅಲಂಕಾರಗಳಿಗೂ ಸರಿಯಾಗಿ, ಕೂಲಂಕಷವಾಗಿ ಅನ್ವಯಿಸಿ, ಹೋಲಿಸಿ, ತುಲನೆಮಾಡಿ ದಾಖಲಿಸಬೇಕಾದ ಅವಶ್ಯಕತೆ ಬಹಳವಾಗಿದೆ. ಅಥವಾ ಅದಕ್ಕಿಂತಲೂ ಮುನ್ನ ಪ್ರಾಚೀನ ಗ್ರಂಥಗಳಲ್ಲಿ ಕಾವ್ಯಲಕ್ಷಣಗಳು ದೊರಕಿದ್ದರೆ ಅದಕ್ಕೇ ಸರಿಯಾಗಿ ತುಲನೆ ಮಾಡಿ ಬರೆದಿಡಬೇಕಾದ ಅವಶ್ಯಕತೆಯೂ ಇದೆ.

"ರಾಮಾಯಣ ಕಾಲದಲ್ಲಿ ಸಂಗೀತವು ಆಸೇತುಹಿಮಾಲಯ ಪರ್ಯಂತ ಉನ್ನತಮಟ್ಟದಲ್ಲಿತ್ತು. ಕೋಸಲ, ಕಿಷ್ಕಿಂಧೆ, ಲಂಕೆ ಇವುಗಳು ಮಾತ್ರವಲ್ಲದೆ ಉತ್ತರ ಕುರುದೇಶದಲ್ಲಿಯೂ, ಹಲವಾರು ಅರಣ್ಯಗಳಲ್ಲಿಯೂ ಸಂಗೀತವು ಹರಡಿತ್ತು. ಇದು ರಾಮಾಯಣದಲ್ಲಿ ಹಲವೆಡೆ ಕಂಡುಬರುತ್ತದೆ. ರಾಮಾಯಣದಲ್ಲಿ ಸಂಗೀತವು ಜನಜೀವನದಲ್ಲಿ ಹಾಸುಹೊಕ್ಕಾಗಿತ್ತು. ಸಾಮಾಜಿಕ ಜೀವನದಲ್ಲಿ ಅದನ್ನು ಉಲ್ಲಾಸ ಮತ್ತು ವಿನೋದಗಳಿಗಾಗಿಯೂ, ಕಾಲಕ್ಷೇಪಕ್ಕಾಗಿಯೂ, ಮಂಗಳಕಾರ್ಯಗಳಿಗಾಗಿಯೂ, ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿಯೂ ಬಳಸಲಾಗುತ್ತಿತ್ತು. ಅಷ್ಟೇ ಅಲ್ಲದೆ ಸಂಗೀತವನ್ನು ಸ್ವಾಗತ ಮತ್ತು ಅತಿಥಿ ಸತ್ಕಾರಕ್ಕಾಗಿಯೂ ಬಳಸಲಾಗುತ್ತಿತ್ತು. ಕೇಕಯ ರಾಜ್ಯಕ್ಕೆ ಹೋಗಿ ಕೆಟ್ಟ ಕನಸಿನಿಂದ ಉದ್ವಿಗ್ನವಾಗಿದ್ದ ಭರತನಿಗೆ ಶಾಂತಿಯನ್ನು ಹರ್ಷವನ್ನೂ ನೀಡಲು ಸಂಗೀತವನ್ನು ಉಪಯೋಗಿಸಲಾಯಿತು. ಸಂಗೀತವು ಕೇವಲ ರಾಜರ ಅಥವಾ ಶ್ರೀಮಂತರ ಭೋಗ್ಯವಸ್ತುವಾಗಿರಲಿಲ್ಲ. ಜನಸಾಮಾನ್ಯರು ಅದರ ಸವಿಯನ್ನು ಅನುಭವಿಸುತ್ತಿದ್ದರು. ಸಂಗೀತವು ಸ್ವಗೃಹಗಳಲ್ಲಿಯೂ ಸಾರ್ವಜನಿಕ ಗೋಷ್ಠಿಗಳಲ್ಲಿಯೂ ಬಹುವಾಗಿ ಬಳಕೆಯಲ್ಲಿತ್ತು. (ರಾಮಾಯಣದಲ್ಲಿ ಸಂಗೀತ - ರಾ. ಸತ್ಯನಾರಾಯಣ. musicresearchlibrary.net). ಹೀಗೆ ಮನೋವೈಜ್ಞಾನಿಕವಾಗಿ ಸಂಗೀತವು ಉಂಟುಮಾಡುವ ಪರಿಣಾಮಗಳನ್ನು ಕುರಿತು ವಾಲ್ಮೀಕಿ ರಾಮಾಯಣವೂ ಒಂದು ಅತ್ಯಂತ ಪ್ರಾಚೀನ ದಾಖಲೆಯೇ ಆಗಿದೆ.

ಸಂಗೀತೋಲ್ಲೇಖಗಳನ್ನು ನೀಡುವ, ತನ್ನ ಕಾಲದ ಸಂಗೀತ/ಗಾಂಧರ್ವದ ಉಪಯೋಗಗಳನ್ನು ತನ್ನ ಮಹಾಕಾವ್ಯದ ಮೂಲಕ ದಾಖಲಿಸುವ ವಾಲ್ಮೀಕಿ ಮಹರ್ಷಿಯು ಇಡೀ ರಾಮಾಯಣದಲ್ಲಿಯೇ ಈ ಅರಣ್ಯ ಕಾಂಡದಲ್ಲಿ ಸಂಗೀತೋಲ್ಲೇಖಗಳನ್ನು ಅತಿ ವಿರಳವಾಗಿ ನೀಡಿದ್ದಾನೆಂಬುದನ್ನು ಗಮನಿಸಬೇಕು. ಅಯೋಧ್ಯಾಕಾಂಡದ ದುಃಖಕರ ಭಾಗಗಳಲ್ಲಿಯೂ ಸಂಗೀತದ ಉಲ್ಲೇಖಗಳನ್ನು ನೀಡುವ ಮಹರ್ಷಿಯು ರಾವಣನು ಸೀತೆಯನ್ನು ಅಪಹರಿಸುವ ಭಾಗದಲ್ಲಿ ಒಂದೇ ಒಂದು ಬಾರಿಯೂ ಸಂಗೀತವನ್ನು ಕುರಿತಾದ

Copyright protected

ಒಂದೇ ಒಂದು ವಿಷಯವನ್ನೂ ಹೇಳಿಲ್ಲ. ಅರಣ್ಯಕಾಂಡದಲ್ಲಿ ಸೀತಾಪಹರಣದ ಭಾಗದಲ್ಲಿ ರಾವಣನ ಅರಮನೆಯಲ್ಲಿದ್ದ ದುಂದುಭಿಘೋಷದ ಬಗ್ಗೆ ಮಾತ್ರ ಒಂದು ಉಲ್ಲೇಖವಿದೆ.

ಈ ವಿಶೇಷವು ಸಂಗೀತವನ್ನು ಕುರಿತು ಮಹರ್ಷಿಗಿದ್ದ ಗೌರವವನ್ನೂ ಪ್ರೀತಿಯನ್ನೂ, ಕಾವ್ಯೋಚಿತವಾದ ಸಂದರ್ಭಗಳಲ್ಲಿದ್ದ ರಸೌಚಿತ್ಯವನ್ನೂ ತೋರುತ್ತದೆ. ಮಾತ್ರವಲ್ಲದೆ, ಉತ್ತರರಾಮಾಯಣದಲ್ಲಿ ಸೀತೆಗಾದ ಕಷ್ಟಕರ ಸನ್ನಿವೇಶಗಳನ್ನೆಲ್ಲ ಆ ಸಮಯದಲ್ಲಿಯೇ, ಪ್ರತ್ಯಕ್ಷವಾಗಿಯೇ, ಕವಿಯು ನೋಡಿದ್ದನೆಂದು ತಿಳಿಯುತ್ತದಲ್ಲವೇ? ಆದ್ದರಿಂದ ಸೀತಾಚರಿತವನ್ನು ತನ್ನ ಬರವಣಿಗೆಯ ಮೂಲಕ ದಾಖಲಿಸಿದ ಈ ಮಹಾಕವಿಯು ಅರಣ್ಯಕಾಂಡದ ಈ ಸಂದರ್ಭದಲ್ಲಿ ತನಗಾದ ಮನಸ್ಸಿನ ವೇದನೆಯನ್ನು ಈ ಮೂಲಕ ತೋರ್ಪಡಿಸಿಕೊಂಡನೇನೋ! ಎಂದೂ ನನಗೆನ್ನಿಸುವುದುಂಟು.

ರಾಮಾಯಣದ ಕಾಲದಲ್ಲಿ ಸಂಗೀತವು /ಗಾಂಧರ್ವವು ಒಂದು ವೃತ್ತಿಯ ಸ್ಥಾನಮಾನವನ್ನು ಗಳಿಸಿತ್ತು. ಈ ಕಾಲದಲ್ಲಿ ಗಾಂಧರ್ವವನ್ನೇ ಕುಲಕಸುಬಾಗಿ ಇಟ್ಟುಕೊಂಡಿದ್ದವರ ಒಂದು ಗುಂಪು ಸಮಾಜದಲ್ಲಿ ಒಂದು ಮುಖ್ಯ ಭಾಗವಾಗಿತ್ತು. ರಾಜರು ಯುದ್ಧಕ್ಕೋ, ಯಾತ್ರೆಗೋ ಹೊರಟಾಗ ಇಂತಹವರು ರಾಜಪರಿವಾರದೊಂದಿಗೆ ಇರುತ್ತಿದ್ದರು. ಅಯೋಧ್ಯೆ, ದಶರಥನ ಆಸ್ಥಾನ, ರಾವಣನ ಅರಮನೆ ಮತ್ತು ಅಂತಃಪುರಗಳು, ಪಾನಭೂಮಿಗಳು, ಕೈಕಯರಾಜ್ಯ, ಕಿಷ್ಕಿಂಧೆ ಇವುಗಳಲ್ಲಿ ಅನೇಕ ಸಂಗೀತಗಾರರಿದ್ದರು. ಎಲ್ಲ ಶುಭಸನ್ನಿವೇಶಗಳಲ್ಲೂ ಸಮಾಜದಲ್ಲಿ ಸಂಗೀತಕ್ಕೆ ಪ್ರಮುಖಸ್ಥಾನವಿತ್ತು. ಮಾತ್ರವಲ್ಲದೆ, ದೇವತೆಗಳಲ್ಲಿಯೂ ಗಾಂಧರ್ವವೂ ನರ್ತನವೂ ವೃತ್ತಿಯಾಗುಳ್ಳವರು ಇದ್ದರು. ದೇವಗಂಧರ್ವರು ಸಂಗೀತವೃತ್ತಿಯಿಂದಾಗಿ ದೇವತೆಗಳಿಗೆ ಮನರಂಜನೆಯನ್ನುಂಟುಮಾಡುತ್ತಿದ್ದರು. ಹೀಗೆ ಗಾಂಧರ್ವದಿಂದಾಗಿಯೇ ಅತಿಮಾನವರು ಎನಿಸಿಕೊಂಡಿದ್ದ ಗಂಧರ್ವರು ತಮ್ಮ ಸಂಗೀತದಿಂದಾಗಿ ಲೋಕಕಲ್ಯಾಣಕರ ಸನ್ನಿವೇಶಗಳಲ್ಲಿ ತಮ್ಮ ಸಂಗೀತದ ಮೂಲಕ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು ಹಾಗೂ ಇತರರಿಗೆ ಸಂತೋಷವನ್ನು ನೀಡುತ್ತಲೂ ಇದ್ದರು.

ಈ ಗಂಧರ್ವರು ಹಿಮಾಲಯದ ತಪ್ಪಲಲ್ಲಿ ಜೀವಿಸುತ್ತಿದ್ದು ಎತ್ತರದಲ್ಲಿಯೇ ಚಲಿಸುತ್ತಿದ್ದರಿಂದ ಇವರಿಗೆ ದೇವಗಂಧರ್ವರೆಂಬ ಕೀರ್ತಿಬಂದಿತೇ ಎಂದು ತಿಳಿಯದು. ಇಂದೂ ಯಕ್ಷ, ಗಂಧರ್ವ, ಕಿನ್ನೌರ/ಕಿನ್ನರ, ಪೈಶಾಶಿಕ ಜನಾಂಗಗಳು ಬಹು ಅಲ್ಪಸಂಖ್ಯಾತರಾಗಿ ಜೀವಿಸುತ್ತಿರುವುದು ತಿಳಿದುಬರುತ್ತದೆ. (ಇಂತಹ

Copyright protected

ಅನೇಕಾನೇಕ ಜನಾಂಗಗಳ ಅಪರೂಪದ ಜನಾಂಗಗಳ ಬಗ್ಗೆಯೂ ಮತಾಂತರ ಮಾಡುವ ಸಲುವಾಗಿ ನಿಜವಾದ ಸಂಶೋಧನೆಗಳನ್ನು ಮಾಡುತ್ತಿರುವುದು, 'ಜೋಷುವಾ ಪ್ರಾಜೆಕ್ಟ್' ಎಂಬ ಹೆಸರಿನಲ್ಲಿ ಕ್ರಿಶ್ಚಿಯನ್ನರು. ಈ ಬಗ್ಗೆ ಆಸಕ್ತರು https://joshuaproject.net/ ನಲ್ಲಿ ದಾಖಲೆಯಾಗಿರುವ, ಭಾರತೀಯರಾದ, ಪ್ರಸ್ತುತ ಅತಿವಿರಳವಾಗಿರುವ, ಅನೇಕಾನೇಕ ಜನಾಂಗಗಳ ಬಗ್ಗೆ ಮಾಹಿತಿಗಳನ್ನು ಪಡೆಯಬಹುದು. )

ಸರ್ಗ 1—

**#.. ಪೂಜಿತಂ ಚೋಪನೃತ್ತಂ ಚ ನಿತ್ಯಮಪ್ಸರಸಾಂ ಗಣೈಃ ।**
**ವಿಶಾಲೈರಗ್ನಿಶರಣೈಃ ಸ್ರುಗ್ಭಾಂಡೈರಜಿನೈಃ ಕುಶೈಃ।। ೪।।**

ಭಾವಾರ್ಥ — ಅಪ್ಸರೆಯರು (ಆಶ್ರಮಪ್ರದೇಶದ ಚೆಲುವಿಗೆ ಮರುಳಾಗಿ) ಬಂದು ಆ ಸ್ಥಳವನ್ನು ಗೌರವದಿಂದ ಕಾಣುತ್ತ, ಸಮೀಪದಲ್ಲಿ ನರ್ತಿಸುತ್ತಿದ್ದರು. ಆಶ್ರಮಗಳಲ್ಲಿ ವಿಶಾಲವಾದ ಯಜ್ಞಶಾಲೆಗಳಿದ್ದವು. ಸ್ರುಕ್ ಮೊದಲಾದ ಯಜ್ಞಪಾತ್ರೆಗಳೂ, ಕೃಷ್ಣಾಜಿನ, ದರ್ಭೆ, ಸಮಿತ್ತು, ಜಲಕುಂಭ, ಫಲಮೂಲಾದಿಗಳೂ ತುಂಬಿದ್ದವು.

ಪರಿಭಾಷೆಗಳು — **ಅಪ್ಸರೆ, ನೃತ್ತ** — ಹಿಂದಿನ ಕಾಂಡಗಳಲ್ಲಿ ಹೇಳಿದೆ.

ಸರ್ಗ 11 —

**1.. ಪ್ರಸನ್ನಸಲಿಲೇ ರಮ್ಯೇ ತಸ್ಮಿನ್ ಸರಸಿ ಶುಶ್ರುವೇ ।**
**ಗೀತವಾದಿತ್ರ ನಿರ್ಘೋಷೋ ನ ತು ಕಶ್ಚನ ದೃಶ್ಯತೇ ।। 7।।**

ಭಾವಾರ್ಥ — ಆ ಕೊಳದಲ್ಲಿ ತಿಳಿನೀರು ಸಮೃದ್ಧವಾಗಿತ್ತು. ಆಶ್ಚರ್ಯವೆಂದರೆ ಅಲ್ಲಿ ಸಂಗೀತಧ್ವನಿಯೂ ವಾದ್ಯಘೋಷವೂ ಕೇಳಿಸುತ್ತಿತ್ತು! ಯಾರಿಗೂ ಕಣ್ಣಿಗೆ ಕಾಣಿಸುತ್ತಿರಲಿಲ್ಲ !

Copyright protected

ಪರಿಭಾಷೆಗಳು — **ಗೀತವಾದಿತ್ರ** — ಹಿಂದಿನ ಕಾಂಡಗಳಲ್ಲಿ ಹೇಳಿದೆ.

**2..ರಮಯಂತಿ ತಪೋಯೋಗಾನ್ಮುನಿಂ ಯೌವನಮಾಸ್ಥಿತಮ್ ।**

**ತಾಸಾಂ ಸಂಕ್ರೀಡಮಾನಾನಾಮೇಷ ವಾದಿತ್ರನಿಃಸ್ವನಃ।। 19।।**

**3.. ಶ್ರೂಯತೇ ಭೂಷಣೋನ್ಮಿಶ್ರೋ ಗೀತಶಬ್ದೋ ಮನೋಹರಃ ।**

**ಆಶ್ಚರ್ಯಮಿತಿ ತಸ್ಯೈತದ್ವಚನಂ ಭಾವಿತಾತ್ಮನಃ।। 20।।**

ಭಾವಾರ್ಥ — ಆ ಮುನಿಯು ತಪೋಬಲದಿಂದ ತಾರುಣ್ಯವನ್ನು ಪಡೆದಿದ್ದಾನೆ. ಅವರು (ಪಂಚ ಅಪ್ಸರೆಯರು) ಕ್ರೀಡಿಸುವಾಗ ಆ ವಾದ್ಯಧ್ವನಿಯು ಬರುತ್ತದೆ. ಒಡವೆಗಳ ಕುಲುಕುಲು ಶಬ್ದ, ಸಂಗೀತದ ಇಂಚರ - ಇವೆಲ್ಲ ಅವರದು ಎಂದು ನುಡಿದನು.

ಪರಿಭಾಷೆಗಳು - **ವಾದಿತ್ರ, ಗೀತ** — ಇವುಗಳನ್ನು ಈ ಹಿಂದೆ ಹೇಳಿದೆ.

**ಸರ್ಗ 24 —**

**ರಕ್ಷಸಾಂ ನರ್ದತಾಂ ಘೋರಃ ಶ್ರೂಯತೇ ಚ ಮಹಾಧ್ವನಿಃ ।**

**ಆಹತಾನಾಂ ಚ ಭೇರೀಣಾಂ ರಾಕ್ಷಸೈಃ ಕ್ರೂರಕರ್ಮಭಿಃ ।। 10।।**

ಭಾವಾರ್ಥ — ರಾಕ್ಷಸರ ಘೋರ ಗರ್ಜನೆಯು ಕೇಳಿಸುತ್ತಿದೆ. ಆ ಕ್ರೂರಾತ್ಮರು ಬಾರಿಸುತ್ತಿರುವ ಭೇರಿಗಳ ಸದ್ದು!

ಪರಿಭಾಷೆಗಳು — **ಭೇರಿ** - ಈ ಮೊದಲೇ ಹೇಳಿದೆ.

**ಧ್ವನಿ —** ಧ್ವನಿ ಎಂಬ ಪರಿಭಾಷೆಯು ಸಂಗೀತಸಮಯದಲ್ಲಿ ರಸೋತ್ಪತ್ತಿಯ ಸಮಯದಲ್ಲಿ ಪ್ರಯುಕ್ತವಾಗುವಂತಹದ್ದು. ಮಾತುವಿನ ಎಂದರೆ ಸಾಹಿತ್ಯದ ಧ್ವನಿಯ ಕಾಕುಗಳು ಸಂಗೀತದಲ್ಲಿ ಗಮಕಗಳಾಗಿ ಪರಿಣಮಿಸುತ್ತವೆ.

Copyright protected

ಸಂಗೀತದಲ್ಲಿ ಧ್ವನಿ ಎಂಬ ಪರಿಭಾಷೆಗೆ ರಾ. ಸತ್ಯನಾರಾಯಣರವರು ಹೀಗೆ ಹೇಳಿದ್ದಾರೆ :---.

Dhvani connotes both suggestive expression and suggestive times, and has the ability to evoke both primary and secondary meanings in music. These notions may be extrapolated from the spoken, articulate sound (syllable) to musical articulate sound (svara). Expression of meaning of non-literal articulate sense. Bhartṛhari (Vākyapadīya) postulates two kinds of dhvani viz. prākṛta (primary) and vikrta (secondary, individuated). The first generates the word-sound gestalt and the second, its individualized expression through subjective parameters such as relative speeds and intensities of utterance of constituent symbols (syllables). A single word, though fixed in its sound content, is individualized when uttered by different persons at different speeds (which determine the comprehension of meaning). Some words besides arousing conventional, contextual and secondary meaning, have also the additional ability or function of manifesting suggested meaning through variable speed in enunciation. So this is also called dhvani. Similarly svara, when performed with gamaka and varying durations and speeds by different musicians at different sounds through dhvani may be regarded as rāga. The use of such sounds in varying durations such as druta (fast) and vilamba (slow) is of basic importance in rāga, because other things being equal, it is this structural variability which makes possible a great multiplicity of possible expressions

Copyright protected

or expressiveness, each of them conferring specificity or individuality on meaning. The concept of sphota (emergence of meaning not in successive stages but in a burst at the end of the final symbol of expression) may be readily extended to rāga because, though temporal sequentiality or the semantic symbols (phonemes in words, words in phrases, phrases in sentences... in language; śrutis in svara, svaras in varṇālankāra, varṇālankāra in sthāya, sthāya in ākṣiptikā etc. limbs in rāga) is inevitable in all discursive semantic modes, meaning of the whole is perceived in a burst (sphota) only at the end of the final symbol; such meaning results from the progressive accumulation of semantic impress (samskāra) of individual units or elements or elements of expression. In other words, dhvani conveys the whole sense of the rāga in a burst and not in stages or phases; these latter are only a methodological necessity and are only technical parameters. Dhvani may also be classified into the embellishable (vastu), embellishment (alankāra), transient emotion (bhava) and aesthetic configuration.

Copyright protected

ಈ ಸಂದರ್ಭದಲ್ಲಿ ಧ್ವನಿಯೆಂಬುದು 'ಮಹಾ' ಎಂಬ ವಿಶೇಷಣದೊಂದಿಗೆ ಸೇರಿ ರಾಕ್ಷಸರ ಬಲಿಷ್ಠತೆಯನ್ನೂ, ಶುಭದಲ್ಲೂ ಉಪಯುಕ್ತವಾಗುವ ಭೇರಿ ವಾದ್ಯವು ಇಲ್ಲಿ ರಕ್ಕಸರ ಅಟ್ಟಹಾಸವನ್ನು ಮೆರೆಯುತ್ತಿದೆಯೆಂಬುದನ್ನೂ ಹೇಳುತ್ತಿದೆ.

**ಸರ್ಗ 30 —**

**ಏತಸ್ಮಿನ್ನಂತರೇ ದೇವಾಶ್ಚಾರಣೈಃ ಸಹ ಸಂಗತಾಃ ।**

**ದುಂದುಭೀಂಶ್ಚಾಭಿನಿಘ್ನಂತಃ ಪುಷ್ಪವರ್ಷಂ ಸಮಂತತಃ।। 33।।**

ಭಾವಾರ್ಥ — ಈ ಸಮಯದಲ್ಲಿ ದೇವತೆಗಳು ಚಾರಣರೊಡನೆ ಹರ್ಷದಿಂದ ದುಂದುಭಿಗಳನ್ನು ಬಡಿಯುತ್ತ ಶ್ರೀರಾಮನ ಸುತ್ತಲೂ ಹೂವಿನ ಮಳೆಯನ್ನು ಸುರಿಸಿದರು.

ಪರಿಭಾಷೆಗಳು —

**1.ಚಾರಣರು —** ಬಾಲಕಾಂಡದಲ್ಲಿ ಕುಶೀಲವರನ್ನು ಹೇಳುವಾಗ ಹೇಳಿದೆ.

**2.ದುಂದುಭಿ —** ಈ ವಾದ್ಯವನ್ನು ಕುರಿತು ಹಿಂದೆ ಹೇಳಿದೆ.

**ಸರ್ಗ 32 —**

**ತಸ್ಯಾನುರೂಪೋ ಬಲವಾನ್ ರಕ್ತಾಕ್ಷೋ ದುಂದುಭಿಸ್ವನಃ ।**

**ಕನೀಯಾನ್ ಲಕ್ಷ್ಮಣೋ ನಾಮ ಭ್ರಾತಾ ಶಶಿನಿಭಾನನಃ ।। 16।।**

ಭಾವಾರ್ಥ — ಆತನಿಗೆ ಅನುರೂಪನಾದ ಲಕ್ಷ್ಮಣನೆಂಬ ತಮ್ಮನೊಬ್ಬನಿದ್ದಾನೆ. ಆತನೂ ಮಹಾಶೂರ. ಲಕ್ಷ್ಮಣನ ಕಣ್ಣುಗಳು ಕೆಂಪುರೇಖೆಯಿಂದ ಸುಂದರವಾಗಿದೆ. ದುಂದುಭಿಯಂತೆ ಗಂಭೀರ ಧ್ವನಿ. ಚಂದ್ರನಂತೆ ರಮಣೀಯ ಮುಖ.



ಪರಿಭಾಷೆಗಳು **- ದುಂದುಭಿ. -** ಹೇಳಿದೆ.

**ಸರ್ಗ 35 —**

**ಪಾಂಡರಾಣಿ ವಿಶಾಲಾನಿ ದಿವ್ಯಮಾಲ್ಯಯುತಾನಿ ಚ ।**

**ತೂರ್ಯಗೀತಾಭಿಜುಷ್ಟಾನಿ ವಿಮಾನಾನಿ ಸಮಂತತಃ।। 19।।**

Copyright Protected

ಭಾವಾರ್ಥ —. ಅಲ್ಲಿ ನೆರೆದಿದ್ದ ಶುಭ್ರವರ್ಣದ ವಿಶಾಲವಿಮಾನಗಳು ದಿವ್ಯಮಾಲ್ಯಗಳಿಂದ ಶೋಭಿಸುತ್ತಿದ್ದವು. ಅವುಗಳಲ್ಲಿ ಇಂಪಾದ ವಾದ್ಯಘೋಷವೂ ಇಂಪಾದ ಸಂಗೀತವೂ ನಡೆಯುತ್ತಿತ್ತು.

ಪರಿಭಾಷೆಗಳು — **ತೂರ್ಯ, ಗೀತ** — ಈ ಹಿಂದೆ ಹೇಳಿದೆ.

ಸರ್ಗ 55 —

**ದಿವ್ಯದುಂದುಭಿನಿರ್ಹ್ರಾದಂ ತಪ್ತಕಾಂಚನತೋರಣಮ್ ।**

**ಸೋಪಾನಂ ಕಾಂಚನಂ ಚಿತ್ರಮಾರುರೋಹ ತಯಾ ಸಹ ।। 9।।**

ಭಾವಾರ್ಥ — ದಿವ್ಯದುಂದುಭಿಗಳು ಮೊಳಗುತ್ತಿದ್ದವು ಅಪರಂಜಿಯ ತೋರಣಗಳು ಮನೋಜ್ಞವಾಗಿದ್ದವು ಅವೆಲ್ಲವನ್ನೂ ತೋರಿಸುವುದಕ್ಕಾಗಿ ರಾವಣನು ಸೀತೆಯನ್ನು ಬಲಾತ್ಕಾರವಾಗಿ ಕರೆದುಕೊಂಡು ಕಾಂಚನಮಯವಾದ ವಿಚಿತ್ರ ಸೋಪಾನವನ್ನು ಹತ್ತಿ ಹೋದನು.

ಪರಿಭಾಷೆಗಳು - **ದುಂದುಭಿ** - ಈಗಾಗಲೇ ಹೇಳಿದೆ.

------------

ರಾಮ ಲಕ್ಷ್ಮಣರು ಜಟಾಯುವಿಗೆ ಉದಕಕ್ರಿಯೆಯನ್ನು ಮಾಡಿ, ಸೀತೆಯನ್ನು ಅನ್ವೇಷಿಸುತ್ತ ದಕ್ಷಿಣ ದಿಕ್ಕಿಗೆ ಹೋಗುವಾಗ ಸ್ವಲ್ಪ ಪಶ್ಚಿಮ ದಿಕ್ಕಿಗೆ, ಎಂದರೆ ನೈಋತ್ಯದಿಕ್ಕಿಗೆ ಹೋಗಲಾರಂಭಿಸಿದರು. ಆ ಗೊಂಡಾರಣ್ಯವನ್ನು ಬೇಗ ಬೇಗ ಅತಿಕ್ರಮಿಸುತ್ತ ದಕ್ಷಿಣ ದಿಕ್ಕನ್ನು ಹಿಡಿದು ಹೋಗುತ್ತ, ಜನಸ್ಥಾನದಿಂದ ಮೂರು ಹರಿದಾರಿಗಳಷ್ಟು ದೂರವನ್ನತಿಕ್ರಮಿಸಿ ಗಂಭೀರವಾದ ಕ್ರೌಂಚಾರಣ್ಯವನ್ನು ಪ್ರವೇಶಿಸಿ, ಅಲ್ಲಲ್ಲಿ ಸೀತೆಯನ್ನು ಹುಡುಕುತ್ತ ಕ್ರೌಂಚಾರಣ್ಯವನ್ನು ದಾಟಿ ಮತಂಗಾಶ್ರಮದ ಪೂರ್ವದಲ್ಲಿ, ದಕ್ಷಿಣದ ಕಡೆಗೆ ಮೂರು ಹರಿದಾರಿ ನಡೆದು ಮಧ್ಯದಲ್ಲಿ ಇನ್ನೊಂದು ಘೋರವಾದ ವನವನ್ನು ಪ್ರವೇಶಿಸಿದರು. (ಅ. ಕಾಂ. ಸರ್ಗ 69 ರ ಆರಂಭದಲ್ಲಿ ಈ ಶ್ಲೋಕಗಳಿವೆ). ಋಷ್ಯಮೂಕ ಪರ್ವತವು ಪಂಪಾಸರೋವರದ ತೀರದಲ್ಲಿದೆ

Copyright protected

(ಅ. ಕಾಂ. ಸರ್ಗ 72. ಶ್ಲೋ. 12). ಇಲ್ಲೊಂದು ವಿಶೇಷ ಸಂಗತಿಯಿದೆಯೆಂಬುದು ಕೆಳಗಿನ ವಿವರಗಳಿಂದ ತಿಳಿಯುತ್ತದೆ.

**ಸರ್ಗ 73** ರಲ್ಲಿ ಶ್ಲೋಕ 22 ರಿಂದ ಮತಂಗಮುನಿಯ ಆಶ್ರಮದ, ಅವರ ಶಾಂತಚಿತ್ತರಾದ ಶಿಷ್ಯರುಗಳ, ಮತಂಗಮುನಿಯ ಪರಿಚರ್ಯೆ ಮಾಡುತ್ತಿದ್ದ ಶಬರಿಯ ವಿವರಗಳು ಇವೆ. ಈ ವಿವರಗಳನ್ನು ದನು ಎಂಬುವನ ಶಾಪಗ್ರಸ್ತ ಪುತ್ರ ಕಬಂಧ ರಾಕ್ಷಸನು ರಾಮನಿಂದ ಶಾಪವಿಮುಕ್ತನಾಗಿ ದಿವ್ಯಶರೀರನಾಗಿ ಹೇಳುತ್ತಿದ್ದಾನೆ. ಋಷ್ಯಮೂಕ ಪರ್ವತದ ಕೆಳಗೆ ಪಂಪಾಸರೋವರದ ಪಶ್ಚಿಮ ತೀರಕ್ಕೆ ಹೋದರೆ ಅದ್ಭುತವೂ ಗೋಪ್ಯವೂ ಆಗಿದ್ದ ಮತಂಗಾಶ್ರಮವು ಇದ್ದಿತು. ಆ ವನದಲ್ಲಿಯೂ ಋಷ್ಯಮೂಕ ಪರ್ವತದಲ್ಲಿಯೂ ಬೇಕಾದಷ್ಟು ಕಾಡಾನೆಗಳು ಇದ್ದರೂ ಮತಂಗಮುನಿಯ ಪ್ರಭಾವದಿಂದ ಅವಕ್ಕೆ ಆಶ್ರಮಕ್ಕೆ ಬಾಧೆಯನ್ನು ಕೊಡಲು ಅವುಗಳಿಗೆ ಸಾಮರ್ಥ್ಯವಿರಲಿಲ್ಲ. ಆದ್ದರಿಂದ ಆ ವನಕ್ಕೆ ಮತಂಗವನವೆಂಬ ಪ್ರಸಿದ್ಧಿ ಇತ್ತು. ಪಂಪಾಸರೋವರದ ಪೂರ್ವದಿಕ್ಕಿನಲ್ಲಿ ಸುಂದರವಾದ, ಹತ್ತಲು ಬಹಳ ಕಷ್ಟವಾದ ಋಷ್ಯಮೂಕ ಗಿರಿಯಿದೆ. ಅದನ್ನು ಶಿಶುನಾಗರೆಂಬ ರಾಕ್ಷಸರು ಕಾವಲು ಕಾಯುತ್ತಿದ್ದರು. ಆ ಪರ್ವತವನ್ನು ಧರ್ಮನಿಷ್ಠರಾದವರು ಮಾತ್ರ ಹತ್ತಬಹುದಿತ್ತು. ಪಾಪಿಗಳಾಗಿದ್ದರೆ ಶಿಶುನಾಗರು ಅವರನ್ನು ಕೊಲ್ಲುತ್ತಿದ್ದರು. ಮತಂಗಾರಣ್ಯದಲ್ಲಿ ಕ್ರೀಡಿಸುತ್ತಿದ್ದ ಶಿಶುನಾಗರ ಕೋಲಾಹಲವು ಪಂಪಾಸರೋವರದವರೆಗೂ ಕೇಳುತ್ತಿತ್ತು ಅಲ್ಲಿ ಮದ್ದಾನೆಗಳು ಕಾದಾಡುತ್ತಿದ್ದು ಗಾಯಗೊಳ್ಳುತ್ತಿದ್ದವು. ಅಲ್ಲಿಯೇ ಮೇಲಿದ್ದ ಗುಹೆಯೊಂದರಲ್ಲಿ ಸುಗ್ರೀವನಿದ್ದನು. ಮತಂಗವನದಲ್ಲಿ, ಜ್ಞಾನನಿಷ್ಠಳಾಗಿದ್ದ ಶಬರಿಯು ತನ್ನ ಗುರುವಾದ ಮತಂಗಮಹರ್ಷಿಯ ಮಹಿಮೆಗಳನ್ನು ರಾಮನಿಗೆ ವಿವರಿಸುತ್ತಾಳೆ. ಮತಂಗಾಶ್ರಮದಿಂದ ಹೊರಟ ರಾಮ ಲಕ್ಷ್ಮಣರು ಪಂಪಾಸರೋವರದ ಕಡೆಗೆ ಬಂದರು. ಮುಂದೆ ದಾರಿಯಲ್ಲಿ ಸುಂದರವನದ ನಡುವೆ ಒಂದು ಪುಷ್ಕರಣಿಯಿತ್ತು. ಅಲ್ಲಿಂದಲೂ ಮುಂದೆ ದಾರಿಯಲ್ಲಿ ಸುಂದರ ತಾಣವಾದ ಮತಂಗಸರಸ್ಸು ಎಂಬ ಪುಣ್ಯತೀರ್ಥದಲ್ಲಿ ರಾಮನು ಸ್ನಾನ ಮಾಡಿದನು. ಮುಂದೆ ಪಂಪಾಸರೋವರವೂ ಅದರ ತೀರದಲ್ಲಿ ಸುಗ್ರೀವನು ವಾಸಿಸುತ್ತಿದ್ದ ಋಷ್ಯಮೂಕಗಿರಿಯೂ ಇತ್ತು. ಈ ಸ್ಥಳಗಳು ಮುಂದೆ ಅದೆಷ್ಟೋ ಕಾಲಾಂತರದಲ್ಲಿ ವಿಜಯನಗರ ಸಾಮ್ರಾಜ್ಯದ ಹಂಪೆಗೆ ಸೇರಿದ್ದವು.

Copyright protected

ಸುಮಾರು 6/7ನೆಯ ಶತಮಾನದಲ್ಲಿ ಹಂಪೆಯಲ್ಲಿ ಇದ್ದು, 'ಬೃಹದ್ದೇಶೀ'ಯೆಂಬ ಸಂಗೀತಶಾಸ್ತ್ರಗ್ರಂಥವನ್ನು ರಚಿಸಿದ್ದ ಮತಂಗಮುನಿಯೂ ಇದೇ ಮತಂಗ ಋಷಿಯ ಪರಂಪರೆಯೆಂದು ಊಹಿಸಲು ಸಾಧ್ಯವಿದೆ. ಆತನೂ ಇದೇ ಭಾಗದಲ್ಲೇ ಇದ್ದವನು. ಅನಂತರದಲ್ಲಿ ಅಲ್ಲೇ ಆನೆಗೊಂದಿ, ಹಸ್ತಿಪುರ ಮುಂತಾದ ಹೆಸರುಗಳಿಂದ ಆನೆಗಳ ಸಾಕಣೆಯ ಪ್ರಮುಖ ತಾಣವಾಗಿದ್ದ ವಿಜಯನಗರ ಅರಸರ ಕಾಲದಲ್ಲಿ ರಾಜಧಾನಿಯೂ ಆಗಿದ್ದ ಈ ಸ್ಥಳವು ಆನೆಗಳಿಗೂ ಮುಖ್ಯ ತಾಣವಾಗಿತ್ತು. ವಿಜಯನಗರದ ಅರಸರು ಮತಂಗ ದಿಡ್ಡಿ, ಮತಂಗ ಕೊತ್ತಳ ಇತ್ಯಾದಿ ಸ್ಥಳಗಳನ್ನು ಈ ಮತಂಗಮುನಿಯ ವಂಶಜರ ಗೌರವಕ್ಕಾಗಿಯೇ ಇಟ್ಟಿದ್ದಿರಬಹುದಾದ ಸಾಧ್ಯತೆ ಇದೆ. ಶಬರರೂ ಆನೆಗಳನ್ನು ಸಾಕುವವರೇ. ಯೋಗಸಿದ್ಧಳಾಗಿದ್ದ ಶಬರಿಯು ಬಹುಶಃ ಈ ಕುಲದವಳು. ನಾಗ ಎಂದರೆ ಆನೆಯೆಂಬ ಅರ್ಥವೂ ಇದೆ. ಶಿಶುನಾಗರು ಆನೆಗಳನ್ನು ಸಾಕುತ್ತಿದ್ದವರೆಂದು ಊಹಿಸಬಹುದು. ಮತಂಗ ಎಂದರೂ ಆನೆಯೆಂಬ ಅರ್ಥವಿದೆ. ಮತಂಗ ಕುಲದ ಬಗ್ಗೆ, ಆ ಕುಲದ ಸಂಗೀತ ಹಾಗೂ ಆನೆಗಳ ಸಾಕಣೆಯ ಬಗ್ಗೆಯೂ, ಹಂಪೆಯ ಇಲ್ಲಿರುವ ರಾಮಾಯಣದ ತಾಣಗಳ ಬಗ್ಗೆಯೂ ಹೆಚ್ಚಿನ ಭೂಸಂಶೋಧನೆಗಳೂ ಭಾರತದ ಆರ್ಕಿಯಾಲಜಿ ಹಾಗೂ ಇತಿಹಾಸ ಇಲಾಖೆಗಳ ಮೂಲಕ ನಡೆಯಬೇಕಾಗಿದೆ.

---

Copyright protected

ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)
ಸಂಪುಟ 17 ; ಸಂಚಿಕೆ 2 ; ಮೇ- ಆಗಸ್ಟ್ 2023 ; ಅಂಕಣ- ಭರತಕೌತುಕ

**ಬಾಲಕಾಂಡದಲ್ಲಿರುವ ಪರಿಭಾಷೆಗಳು —**

ತಂತ್ರೀ, ಲಯ, ಗೀತ, ಗಾಂಧರ್ವ, ಸ್ವರಾದಿ, ಗಾಯನ, ಕುಶೀಲವ, ಜಾತಿ, ಪಾಠ್ಯ, ಗೇಯ, ರಸ, ಮಾರ್ಗ, ದೇಶೀ, ಮೂರ್ಛನೆ, ನಾಟಕ, ದುಂದುಭಿ, ಮೃದಂಗ, ಪಣವ, ವೀಣಾ, ನೃತು, ನಟ, ನರ್ತಕ, ಗಾಥಾ, ಗಾಯನ, ಗೀತವಾದಿತ್ರ, ತೂರ್ಯ, ತೌರ್ಯತ್ರಿಕ, ಅಪ್ಸರಾ.

**ಅಯೋಧ್ಯಾಕಾಂಡದಲ್ಲಿರುವ ಪರಿಭಾಷೆಗಳು —**

ಪೂರ್ವಾರ್ಧ — ಶಿಲ್ಪ, ಗಾಂಧರ್ವ, ತಾಲ, ಗಣಿಕೆ, ನಟ, ನರ್ತಕ, ವಾದಿತ್ರ, ಗೀತ, ಭಾಷಾ, ನಾಟಕ, ನಾಟ್ಯ, ನರ್ತನ, ನೃತ್ಯ ಮತ್ತು ನೃತ್ತ, ಗಾಯನ, ವಾದನ, ನಟ, ತೂರ್ಯ, ನಾದ.

ಉತ್ತರಾರ್ಧ —ಗೀತವಾದಿತ್ರ, ಗಾಯನ, ಸ್ತುತಿ, ಸಾಮ, ಪಾಣಿವಾದನ, ತೇನ, ವಾಹೃತಿ, ವೀಣಾ, ಗಾಥಾ, ನಟ, ನರ್ತಕ, ಕಥಾ, ಮೃದಂಗ, ಕೋಣ, ಭೇರಿ, ಶಚೀಪತೇಃ ಕೇತು = ಇಂದ್ರಧ್ವಜ, ಸಾಮ, ದುಂದುಭಿ, ಶಂಖ, ವಾದ್ಯ, ತೂರ್ಯ, ಶೈಲೂಷ, ನಾದ, ದೇವಗಂಧರ್ವರು, ಅಪ್ಸರೆಯರು, ವಿಶ್ವಾವಸು, ಹಾಹಾ ಹೂಹೂ, ನಾರದ, ತುಂಬುರು, ಗೋಪ, ನೃತು, ಲಯ, ಸ್ವರ, ಆಲಂಬುಸೆ, ಮಿಶ್ರಕೇಶೀ, ಪುಂಡರೀಕೆ, ವಾಮನೆ, ಮಾರ್ದಂಗಿಕ, ಕಾಂಸ್ಯಗ್ರಹ, ನೃತ್ತ, ನೃತ್ಯ.

**ಅರಣ್ಯಕಾಂಡದಲ್ಲಿರುವ ಸಂಗೀತ-ನೃತ್ಯಗಳ ಪರಿಭಾಷೆಗಳು —**

ಅಪ್ಸರೆ, ನೃತ್ತ, ಧ್ವನಿ, ಗೀತವಾದಿತ್ರ, ಚಾರಣ, ದುಂದುಭಿ, ಭೇರಿ, ತೂರ್ಯ, ಗೀತ.

---

Copyright protected

**ಆಕರ ಋಣ**

#.. ಶ್ರೀಮದ್ವಾಲ್ಮೀಕಿ ರಾಮಾಯಣಮ್, ಬಾಲಕಾಂಡಃ (ಕನ್ನಡಾನುವಾದ ಸಹಿತ),- ಅನುವಾದಕರು :ವಿದ್ವಾನ್ ಎನ್. ರಂಗನಾಥ ಶರ್ಮಾ, ಪ್ರ. ರಾಮಾಯಣ ಪ್ರಕಾಶನ ಸಮಿತಿ, ನರಸಿಂಹರಾಜ ಕಾಲೋನಿ, ಬೆಂಗಳೂರು - 19. ಆರನೆಯ ಮುದ್ರಣ.

#.. ಭರತಮುನಿ ವಿರಚಿತ ನಾಟ್ಯಶಾಸ್ತ್ರ - ಕನ್ನಡ ಅನುವಾದ, ವಿಮರ್ಶಾತ್ಮಕ ಟಿಪ್ಪಣಿ ಮತ್ತು ಅನುಬಂಧಗಳೊಂದಿಗೆ - ಆದ್ಯ ರಂಗಾಚಾರ್ಯ, ಪ್ರ. ನೀನಾಸಮ್ ರಂಗಶಿಕ್ಷಣ ಕೇಂದ್ರ ಹೆಗ್ಗೋಡು ಪರವಾಗಿ ಅಕ್ಷರ ಪ್ರಕಾಶನ (ಸಾಗರ) ಕರ್ನಾಟಕ. 4ನೇ ಆವೃತ್ತಿ - 2017.

#.. ಪುಂಡರೀಕಮಾಲಾ — (ಶ್ರೀ ಪಂಡರೀವಿಠ್ಠಲನ ಸದ್ರಾಗಚಂದ್ರೋದಯ, ರಾಗಮಾಲಾ, ರಾಗಮಂಜರೀ ಮತ್ತು ನರ್ತನನಿರ್ಣಯಗಳ ಅನುವಾದ, ವಿಮರ್ಶಾತ್ಮಕ ಸಂಪಾದನೆ, ಪೀಠಿಕೆ) — ರಾ. ಸತ್ಯನಾರಾಯಣ, ಪ್ರ. ಕರ್ನಾಟಕ ಸರ್ಕಾರ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಪ್ರ. ಮು. 1986.

#.. ಭಾರತೀಯ ಸಂಗೀತದಲ್ಲಿ ಪರಿಭಾಷಾ ಪ್ರಯೋಗ, ಪ್ರಸಾರಂಗ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1986. ಮತ್ತು ಎರಡನೆಯ ಪ್ರಕಟಣೆ ಬ್ರಹ್ಮವಿದ್ಯಾ, ನಂ. 12. 9ನೇ ಕ್ರಾಸ್, ಜಯನಗರ, ಮೈಸೂರು. 2012 (ಈ ಬರಹಗಳಲ್ಲಿ 'ಬ್ರಹ್ಮವಿದ್ಯಾ' ಪ್ರಕಟಿಸಿದ ಗ್ರಂಥದಲ್ಲಿ ಇರುವ ವಿಷಯಗಳನ್ನು ಆಧರಿಸಿ ಪರಿಭಾಷೆಗಳ ಅರ್ಥಗಳನ್ನು ನೀಡಿದೆ)

#.. ಶ್ರೀ ಮತಂಗಮುನಿ ವಿರಚಿತ 'ಬೃಹದ್ದೇಶೀ', (ಪೀಠಿಕೆ, ಪಠ್ಯಸಂಪಾದನ, ಅನುವಾದ, ಪಾಠವಿಮರ್ಶೆ, ಅನುಬಂಧ), ಡಾ. ರಾ. ಸತ್ಯನಾರಾಯಣ., ಪ್ರ. ಪ್ರಸಾರಾಂಗದ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998.

#.. 'ಏಳೆ' - ಒಂದು ಸಂಗೀತ ಶಾಸ್ತ್ರೀಯ ಅಧ್ಯಯನ, ರಾ. ಸತ್ಯನಾರಾಯಣ, ಪ್ರ. ಬ್ರಹ್ಮವಿದ್ಯಾ, ಜಯನಗರ, ಮೈಸೂರು. 2008.

#.. ಶಿವಶರಣ ಸಂಗೀತ ಸಂಪದ - ಡಾ. ರಾ. ಸತ್ಯನಾರಾಯಣ. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ. ಮೈಸೂರು. 2011.

Copyright protected

#.. ರಾಮಾಯಣದಲ್ಲಿ ಸಂಗೀತ - ರಾ. ಸತ್ಯನಾರಾಯಣ. musicresearchlibrary.net.

#.. ಸಂಸ್ಕೃತ ನಾಟಕ -— ಎ. ಆರ್. ಕೃಷ್ಣಶಾಸ್ತ್ರಿ, Google Books.

#.. 'ವಿಶೇಷ' - ಡಾ. ಆರ್. ಶೇಷಶಾಸ್ತ್ರಿ ಅಭಿನಂದನಾ ಗ್ರಂಥ, ಸಂ. ಡಾ. ಎಚ್. ಎಸ್. ಗೋಪಾಲ ರಾವ್, ಡಾ. ಎಸ್. ಎಲ್. ಶ್ರೀನಿವಾಸಮೂರ್ತಿ, ಚಿತ್ಕಲಾ ಪ್ರಕಾಶನ, ಕುಪ್ಪಂ, 2017).

#.. ವಿಷ್ಣುಮಹಾಪುರಾಣಂ

#.. Karnataka music as Aesthetic Form - by R. Sathyanarayana

#.. https://vedicfeed.com/gandharvas-and-apsaras/

#.. Katha Kirtan — A Study in Evolution and Theme —R. Sathyanarayana. Journal of The Madras University, Ed. C. A. Perumal, pub. by The University of Madras - Volume LV, No 2. September 1983.

#.. Atodhya Vadya | sreenivasarao's blogs

#.. Ramayana : Amirthalingam : Free Download, Borrow, and Streaming : Internet Archive

---

**ರಾಮಾಯಣದಲ್ಲಿ ಪೌಲಸ್ತ್ಯರಾವಣದ ಉಲ್ಲೇಖಗಳು — ಪೌಲಸ್ತ್ಯ ಎಂಬ ವಿಶೇಷಣವನ್ನು ರಾವಣನಿಗೆ ತನ್ನ ಕುಲದ ಬಗ್ಗೆ ಎಚ್ಚರ ಹೇಳುವ, ಗೌರವಪೂರ್ವಕವಾದ ಸಂಬೋಧನಾ ಸಮಯದಲ್ಲಿ ಮಾತ್ರ ಪ್ರಯೋಗಿಸಿದೆ ಎಂಬುದನ್ನೂ ಗಮನಿಸಬೇಕು.**

1) ಬಾಲಕಾಂಡದಲ್ಲಿ — 1.ಸರ್ಗ 20, ಶ್ಲೋ. 16, - ಪೌಲಸ್ತ್ಯವಂಶಪ್ರಭವೋ ರಾವಣೋ ನಾಮ ರಾಕ್ಷಸಃ;

Copyright protected

1) ಅರಣ್ಯಕಾಂಡ — ಸರ್ಗ 22, ಶ್ಲೋ. 12 ರಲ್ಲಿ ಅಗ್ರೇ ನಿರ್ಯಾತುಮಿಚ್ಛಾಮಿ ಪೌಲಸ್ತ್ಯಾನಾಂ ಮಹಾತ್ಮನಾಂ ಎಂದು ಖರನು ಹೇಳುತ್ತಾನೆ. - ಇಲ್ಲಿ ಪೌಲಸ್ತ್ಯ ವಂಶವನ್ನು ಹೇಳಿದೆ.

2) ಸರ್ಗ 23, ಶ್ಲೋ. 28 - ಜಯತಾಂ ರಾಘವಃ ಸಂಖ್ಯೇ ಪೌಲಸ್ತ್ಯಾನ್ ರಜನೀಚರಾನ್ - ಎಂದು ರಾವಣನನ್ನು ಹೇಳಿದೆ.

3) ಸರ್ಗ 24. ಶ್ಲೋ. 21. ಜಯತಾಂ ರಾಘವೋ ಯುದ್ಧೇ ಪೌಲಸ್ತ್ಯಾನ್ ರಜನೀಚರಾನ್ - ರಾವಣನನ್ನು ಹೇಳಿದೆ.

4) ಸರ್ಗ 32. ಶ್ಲೋ. 23 - ರಾಕ್ಷಸೇಂದ್ರಂ ಮಹಾಭಾಗಂ ಪೌಲಸ್ತ್ಯ ಕುಲನಂದನಮ್ - ರಾವಣನನ್ನು ಹೇಳಿದೆ.

5) ಸರ್ಗ 50. ಶ್ಲೋ. 9 - ವ್ಯವಸ್ಯಂತನು ರಾಜಾನಂ ಪೌಲಸ್ತ್ಯಕುಲನಂದನ - ರಾವಣನನ್ನು ಹೇಳಿದೆ.

(ಈ ಪೌಲಸ್ತ್ಯ ರಾವಣೇಂದ್ರನ ವಿವರಗಳು ನಾಟ್ಯಶಾಸ್ತ್ರದಲ್ಲಿ ಹೇಳಿರುವ ಪೌಲಸ್ತ್ಯ ರಾಕ್ಷಸೇಂದ್ರನು ರಾವಣನೇ ಎಂದೂ, ಕವಿ ಮಹರ್ಷಿಯು ಬೇರಾರಿಗೂ ಈ ಸಂಬೋಧನೆಯನ್ನು ಉಪಯೋಗಿಸಿಲ್ಲವೆಂದು ಸಾಧಿಸಲೂ ನೀಡಲಾಗುತ್ತಿದೆ)

----------------

(ಕೃಶಾಶ್ವನೆಂಬ ಪ್ರಜಾಪತಿಯ ಉಲ್ಲೇಖ ವಾ. ರಾಮಾಯಣದಲ್ಲಿ ಸರ್ಗ 21.ಶ್ಲೋ.14ರಲ್ಲಿ ; ಸರ್ಗ 26 ರಲ್ಲಿ ಶ್ಲೋ. 29 ; ಸರ್ಗ 28, ಶ್ಲೋ. 10; )

---------------------

Copyright protected